# ಚಿತ್ತ ಶುದ್ಧಿ

ಭಾರತದ ದೇವಸ್ಥಾನಗಳಿಗೆ ಹರಿದುಬರುವ ಸಂಪತ್ತು ಇಂದಿಗೂ ಅಪಾರ. ತಮ್ಮ ಜೀವಮಾನದುದ್ದಕ್ಕೂ ಇಷ್ಟ ದೇವತೆಗಳಿಗೆ ಪ್ರತಿವರ್ಷವೂ ತಪ್ಪದೆ ನಡೆದುಕೊಳ್ಳುವ ಭಕ್ತರಿದ್ದಾರೆ. ಕಷ್ಟ ಬಂದಾಗ ಹರಕೆಹೊತ್ತು ಕಾಣಿಕೆಗಳನ್ನು ನೀಡುತ್ತೇವೆಂದು ಬೇಡಿಕೊಂಡು ಅದನ್ನು ತೀರಿಸುವ ಆಸ್ತಿಕರಿದ್ದಾರೆ. ಈ ನಡವಳಿಕೆ ಶತ ಶತಮಾನಗಳಿಂದ ನಡೆದುಕೊಂಡು ಬಂದ ಪದ್ಧತಿಯಾಗಿದೆ, ಸಂಪ್ರದಾಯವಾಗಿದೆ. ಈ ಸಂಪ್ರದಾಯದಿಂದಲೇ ಭಾರತದ ದೇವಸ್ಥಾನಗಳಲ್ಲಿ ಸಂಪತ್ತು ಶೇಖರಣೆಯಾಗುತ್ತದೆ. ಇಂದಿನ ದೇವಾಲಯಗಳಲ್ಲಿ ಹಣವನ್ನು ಕಾಣಿಕೆಯಾಗಿ ಪಡೆದರೂ ಅದು ಸಂಪತ್ತಾಗಿ ಪರಿವರ್ತಿತವಾಗುತ್ತದೆ. ಇದರ ಜೊತೆಗೆ ಚಿನ್ನ ಬೆಳ್ಳಿಯ ಆಭರಣ ರೂಪದ ದ್ರವ್ಯವಂತು ಪ್ರವಾಹದ ರೀತಿ ಹರಿದು ಬರುತ್ತಲೇ ಇರುತ್ತದೆ. ಈ ಶೇಖರಣಾ ಪರಿಕ್ರಮದಿಂದಾಗಿಯೇ ದೇವಸ್ಥಾನಗಳಲ್ಲಿ ಕೋಟ್ಯಾನು ಕೋಟಿ ಸಂಪತ್ತು ಸಂಗ್ರಹವಾಗುತ್ತದೆ. ಇದರಿಂದಾಗಿಯೇ ಆಧುನಿಕ ಕಾಲದಲ್ಲಿ ದೇವಸ್ಥಾನ ಕಟ್ಟಿಸುವುದು ಮತ್ತು ದೈವ ಸಂಬಂಧಿಯಾದ ಆಚರಣೆಗಳನ್ನು ನಡೆಸುವುದು ಲಾಭದಾಯಕ ಉದ್ದಿಮೆಯಾಗತೊಡಗಿದೆ. ನೆರಳಿನಲ್ಲಿ ಕುಳಿತು ಮೈಬೆವರು ಸುರಿಸದೆ, ಅನಾಯಸವಾಗಿ ಹಣ ಸಂಪಾದಿಸುವ ಸಾಧನವಾಗಿ ದೇವಸ್ಥಾನಗಳು ರೂಪಾಂತರಗೊಳ್ಳುತ್ತಿವೆ.

ಕಳೆದ ಶತಮಾನದಲ್ಲಿ ವಿದ್ಯೆ ತಂದುಕೊಟ್ಟ ಅರಿವಿನ ಕಾರಣದಿಂದಾಗಿ ಸರ್ವಧರ್ಮ ಸಮನ್ವಯ ಮತ್ತು ಸಮಾನತಾ ಧೋರಣೆ ಜಾಗೃತವಾಗಿತ್ತು. ಎಲ್ಲವನ್ನು ಮಾನ್ಯ ಮಾಡಿ, ಎಲ್ಲವನ್ನು ಗೌರವದಿಂದ ಬಾಳಲು ಬಿಟ್ಟು ತಾನೂ ಬಾಳಬೇಕೆಂಬ ಉದಾರವಾದ ಉಸಿರಾಡತೊಡಗಿತ್ತು. ಅದರ ಬೆನ್ನ ಹಿಂದೆ ಆಧುನಿಕ ಚಿಂತನಾ ತತ್ತ್ವಗಳು ಕೆಲಸ ಮಾಡಿದ್ದವು. ವೈಚಾರಿಕ ಪ್ರಜ್ಞೆ ಮತ್ತು ವೈಜ್ಞಾನಿಕ ಮನೋಧರ್ಮಗಳು ವ್ಯಕ್ತಿಯ ಅಂತಃಚಕ್ಷುವನ್ನು ವಿಶಾಲಗೊಳಿಸಿದ್ದವು. ಇದರ ಫಲವಾಗಿ ದೇವರು ಮತ್ತು ಆ ಸಂಬಂಧಿಯಾದ ನಂಬಿಕೆಗಳು ಬೀದಿಯ ಆಚರಣೆಯಾಗದೆ, ಅದು ಮನೆಯ ಒಳಗಿನ ನಡೆಯೆಂಬಂತೆ ಭಾಸವಾಗತೊಡಗಿದ್ದವು. ಆದರೆ ಕಳೆದ ಕಾಲು ಶತಮಾನದಿಂದೀಚೆಗೆ ಕೇವಲ ಭಾರತ ಮಾತ್ರವಲ್ಲದೆ ಜಗತ್ತಿನೆಲ್ಲೆಡೆ ವ್ಯಾಪಕವಾಗಿ ಹರಡುತ್ತಿರುವ ಧಾರ್ಮಿಕ ಮೂಲಭೂತವಾದದ ಕಾರಣದಿಂದಾಗಿ ಊರು ಕೇರಿಗಳಲ್ಲಿ ಇಂದು ದೇವಸ್ಥಾನಗಳು ನಾಯಿ ಕೊಡೆಗಳಂತೆ ಉದ್ಭವವಾಗುತ್ತಿವೆ. ತಮ್ಮ ಧರ್ಮವೇ ಸರ್ವ ಶ್ರೇಷ್ಠವೆಂಬ ಹುಸಿ ನಿಷ್ಠೆಯಿಂದ ಅನ್ಯಮತ ಸಂಸ್ಕೃತಿಗಳನ್ನು ಹೀಗಳೆದು ದ್ವೇಷದ ಬೀಜಗಳನ್ನು ಬಿತ್ತಿ ಬೆಳೆಯಲಾಗುತ್ತಿದೆ.

ಹೀಗೆ ಸರ್ವರಲ್ಲಿ ಸೋದರತ್ವವನ್ನು ಮೂಡಿಸಬೇಕಾಗಿದ್ದ ಧಾರ್ಮಿಕ ಸಂಸ್ಥೆಗಳು ಒಂದೆಡೆ ಅಸಮಾನತೆಯನ್ನೂ ದ್ವೇಷವನ್ನು ಬೆಳೆಸುತ್ತಿದ್ದರೆ, ಮತ್ತೊಂದೆಡೆ ವ್ಯಾಪಾರೀಕರಣದ ದಂಧೆಯಾಗಿ ಬದಲಾಗಿಬಿಟ್ಟಿವೆ.

ಇದಕ್ಕೆ ವ್ಯಕ್ತಿಯ ಮನೋ ನೆಲೆಯೇ ಮುಖ್ಯ ಕಾರಣವಾಗಿದೆಯೆಂದು ತೋರುತ್ತದೆ. ಅವನ ಚಿತ್ತ ಚಾಂಚಲ್ಯವೇ ಅವನನ್ನು ದಾಸನನ್ನಾಗಿ ಮಾಡಿಕೊಂಡುಬಿಟ್ಟಿದೆ. ತನ್ನ ಚಿತ್ತದ ಮೇಲೆ ಪ್ರಭುತ್ವವನ್ನು ಸಾಧಿಸುವ ದಿಕ್ಕಿನ ಸಾಧನೆಯ ಬಗ್ಗೆ ಅವನು ಚಿಂತೆ ಮಾಡುತ್ತಿರುವಂತೆ ತೋರುತ್ತಿಲ್ಲ. ಅವನ ಚಿಂತೆ ಏನಿದ್ದರೂ ತಾನು ನಂಬಿರುವ ಹುಸಿ ಸತ್ಯವನ್ನು ಸಾಕಾರ ಮಾಡುವ ಬಗೆಗಿನ ಅಶಾಂತಿ ಮಾರ್ಗದ ಬಗ್ಗೆ. ಅದನ್ನು ಬಿಟ್ಟರೆ ತನ್ನ ಬದುಕಿನ ಸುಖವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವ ಸುಲಭದ ಮಾರ್ಗಗಳ ಬಗ್ಗೆ ಅವನ ಆಲೋಚನಾ ಲಹರಿ ಹರಿಯುತ್ತಿದೆ. ಹೀಗಾಗಿ ನಿರ್ಮಲ ಮನಸ್ಸು ಎಂಬುದು ಅವನಿಗೆ ಮರೀಚಿಕೆಯಾಗಿದೆ. ತನ್ನ ಲೌಕಿಕ ಬದುಕಿನಲ್ಲಿ ಸುಖ ಸೌಲಭ್ಯಗಳನ್ನು ಲಂಚ ರುಸುವತ್ತುಗಳನ್ನು ನೀಡಿ ಸಂಪಾದಿಸುವ ಹಾಗೆ ದೇವರಿಗೂ ಲಂಚ ರುಸುವತ್ತುಗಳನ್ನು ನೀಡಿ ಒಲಿಸಿಕೊಳ್ಳಬಹುದೆಂಬ ಮನಸ್ಥಿತಿಯಲ್ಲಿ ಬಹುಪಾಲು ಆಸ್ತಿಕ ಜನರಿದ್ದಾರೆ. ಈ ಮನಸ್ಥಿತಿಯಿರುವುದರಿಂದಲೇ ಇಂದು ಧಾರ್ಮಿಕ ಸಂಸ್ಥೆಗಳಿಗೆ ಮತ್ತು ದೇವಸ್ಥಾನಗಳಿಗೆ ಅಪಾರವಾದ ಧನ ರಾಶಿ ಹರಿದು ಬರುವಂತಾಗಿದೆ. ಆಸ್ತಿಕ ಜನರ ಈ ಮನಸ್ಥಿತಿಯನ್ನು ದುರುಪಯೋಗ ಪಡಿಸಿಕೊಂಡು ಶ್ರೀಮಂತರಾಗುತ್ತಿರುವ ಆಷಾಡಭೂತಿಗಳು ಕೂಡ ಅಧಿಕವಾಗುತ್ತಿದ್ದಾರೆ.

ದೇವರಲ್ಲಿ ನಂಬಿಕೆ ಇರುವ ಮಹಾಶಯರಿಗೆ ಬೇಕಾಗಿರುವುದು ಚಿತ್ತ ಶುದ್ಧಿ; ಹಣ ಐಶ್ವರ್ಯ ಆಡಂಬರಗಳನ್ನು ದೇವರು ಒಲ್ಲನೆಂಬ ತಿಳಿವಳಿಕೆ. ಒಮ್ಮೆ ವಿವೇಕಾನಂದರು ತಮ್ಮ ಗುರು ರಾಮಕೃಷ್ಣರನ್ನು 'ಭಕ್ತರು ದೇವರಿಗೆ ಏನನ್ನು ಅರ್ಪಿಸಬೇಕು? ದೇವರು ತಮ್ಮ ಭಕ್ತರಿಂದ ಏನನ್ನು ಅಪೇಕ್ಷಿಸುತ್ತಾನೆ?' ಎಂದು ಕೇಳುತ್ತಾರೆ. ಅವರ ದೃಷ್ಟಿಯಲ್ಲಿ ದೇವರಿಗೆ ಕಾಣಿಕೆ ರೂಪದಲ್ಲಿ ಧನಕನಕಗಳನ್ನು ಆಡಂಬರ ಅಬ್ಬರ ರೂಪದಲ್ಲಿ ಅರ್ಪಿಸುವ ಭಕ್ತರಿದ್ದರು ಎಂದು ತೋರುತ್ತದೆ. ಅದಕ್ಕೆ ಉತ್ತರವಾಗಿ ಗುರು ರಾಮಕೃಷ್ಣರು 'ತನ್ನ ಮಕ್ಕಳಿಗೆ ಎಲ್ಲವನ್ನು ನೀಡಿರುವ ದೇವರು ಅವರಿಂದ ಏನು ತಾನೆ ಬಯಸಿಯಾನು? ಮಕ್ಕಳಾದ ಭಕ್ತರಲ್ಲಿ ಇರುವುದೆಲ್ಲವೂ ಅವನು ನೀಡಿದ ಭಿಕ್ಷೆಯೇ ಸರಿ. ದೇವರು ತನ್ನ ಭಕ್ತರಿಂದ ಏನನ್ನಾದರೂ ಅಪೇಕ್ಷಿಸಿದರೆ ಅದು ಸಂಪೂರ್ಣವಾಗಿ ಆ ಭಕ್ತನದೇ ಆಗಿರಬೇಕು. ಭಕ್ತನ ಬಳಿ ಇದ್ದುದಾದರೆ– ಅದು ನಿರ್ಮಲವಾದ ಚಿತ್ತವೊಂದೇ. ಆ ನಿರ್ಮಲ ಚಿತ್ತವನ್ನು ಭಗವಂತನಿಗೆ ಅರ್ಪಿಸಿದ್ದೇ ಆದರೆ– ಅವನು ತೃಪ್ತ' ಎನ್ನುತ್ತಾರೆ.

ಆಧುನಿಕ ಧಾರ್ಮಿಕಾಚರಣೆಗಳಿಗೆ ರಾಮಕೃಷ್ಣರ ಮಾತಿನಲ್ಲಿ ಉತ್ತರವಡಗಿದೆ.

**■ ಶಿಕಾಕು**

## ಮಾತೇ ಮುತ್ತು

★ ಕಾಲಿಲ್ಲದ ಹೆಂಡತಿಗೆ, ತಲೆಯಿಲ್ಲದ ಗಂಡ
ಬಂದು ಮದುವೆಯಾದನು ನೋಡಾ...!
ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ...

–ಅಕ್ಕಮಹಾದೇವಿ

★ ಸುಂದರಿಯ 'ನಗು' ಎಂದರೆ, ಹಣದ ಚೀಲದ 'ಅಳು' ಎಂದೇ ಅರ್ಥ.

–ಇಟಲಿ ಗಾದೆ

★ ನೆಂಟರ ಮನೆಗೆ ಹೋಗಬೇಕು; ಅಲ್ಲಿಯೇ ಇರಬಾರದು.

–ಸ್ವೀಡನ್ ಗಾದೆ

★ ಶ್ರೀಮಂತನಿಗೆ ಸಿಕ್ಕುತ್ತದೆ; ಬಡವ ಕಂಡು ಹಿಡಿಯುತ್ತಾನೆ.

–ಜರ್ಮನ್ ಗಾದೆ

★ ದುಃಖ, ಭಯ, ವ್ಯಥೆ, ಹರ್ಷ, ಆಯಾಸ– ಇವೆಲ್ಲವೂ ಆಯಾ ವಸ್ತುವಿನಲ್ಲಿ ಇಟ್ಟಿರುವ ಸ್ನೇಹದಿಂದ ಸಂಭವಿಸುತ್ತವೆ. ಮಾನಸ ವಿಕಾರವೆಲ್ಲವೂ ಸ್ನೇಹದಿಂದ ಹುಟ್ಟುತ್ತವೆ.

–ಮಹಾಭಾರತ

★ ಸುಖ ತೃಪ್ತಿಯಿಂದ ಸಿಗುತ್ತದೆ. ಅದನ್ನು ಪಡೆಯಲು ಶಿಸ್ತು ಇರಬೇಕು. ಅತೃಪ್ತಿಯೇ ದುಃಖಕ್ಕೆ ಮೂಲ.

–ಮನುಸ್ಮೃತಿ

★ ಧರ್ಮ ಕಾನೂನಿಗಿಂತಲೂ ಸದಾ ಶಕ್ತಿಶಾಲಿ ಯಂತ್ರ. ಧಾರ್ಮಿಕ ಮಂಜೂರಾತಿಯಲ್ಲಿ ಸಾಮಾಜಿಕ ಅಂಶಗಳು ಹೇರಳವಾಗಿರುತ್ತವೆ ಎಂಬ ಮಾತು ನಿಜವಾದುದು.

–ಬಿ.ಆರ್.ಅಂಬೇಡ್ಕರ್

★ ಒಳ್ಳೆಯ ಆಡಳಿತದ ಮೊಟ್ಟಮೊದಲ ಅವಶ್ಯಕತೆ– ಕೆಲಸ ಒದಗಿಸುವುದು, ಕೆಲಸ ಮಾಡುವಂತೆ ನೋಡಿಕೊಳ್ಳುವುದು.

–ಆಂಡ್ರೆ ಮಾರೋಯಿಸ್

★ 'ಅದಕ್ಕಾಗಿ ನಾನು ಸಾಯಲೂ ಸಿದ್ಧ' ಎಂದು ಹೇಳಬಹುದಾದುದಕ್ಕೆ ಮನುಷ್ಯ ಅಂಟಿಕೊಳ್ಳದಿದ್ದರೆ ಅವನಿಗೆ ಜೀವಿಸುವ ಹಕ್ಕಿಲ್ಲ.

–ಮಾರ್ಟಿನ್ ಲೂಥರ್ ಕಿಂಗ್

★ ಆತ್ಮ ಮುದುಕನಾಗಿ ಹುಟ್ಟಿ ಯುವಕನಾಗಿ ಬೆಳೆಯುತ್ತದೆ; ಅದು ಜೀವನದ ಕಾಮಿಡಿ. ಶರೀರ ಯುವಕನಾಗಿ ಹುಟ್ಟಿ ಮುದಿಯಾಗುತ್ತದೆ. ಅದು ಜೀವನದ ಟ್ರಾಜಿಡಿ.

–ಆಸ್ಕರ್ ವೈಲ್ಡ್

★ ನನಗೆ ಮೆಚ್ಚುಗೆಯಾಗುತ್ತದೆ ಎಂಬ ಕಾರಣಕ್ಕೆ ಹೆಚ್ಚಿನ ಸೌಲಭ್ಯ, ಸೌಕರ್ಯ ಹೊಂದುವುದು ಜೀವನಕ್ಕೆ ಅನವಶ್ಯಕ ಅಷ್ಟೇ ಅಲ್ಲ, ನಮ್ಮ ಪ್ರಗತಿಯ ದಾರಿಯ ಮುಳ್ಳುಗಳು.

–ಎಚ್.ಡಿ.ಥೋರೋ

★ ಆತ್ಮವನ್ನು ಕಳೆದುಕೊಂಡು ಇಡೀ ಜಗತ್ತನ್ನು ಪಡೆದರೂ ಏನು ಪ್ರಯೋಜನ?

–ಬೈಬಲ್

★ ಭಯದಿಂದ ಆಳುವುದಕ್ಕಿಂತ, ಪ್ರೀತಿಯಿಂದ ಆಳುವುದು ಲೇಸು.

–ಡೇವಿಡ್ ಬೇಟ್ಸ್